ST. FRANCIS DE SALES COLLEGE

A FRANSALIAN INSTITUTE OF HIGHER EDUCATION AUTONOMOUS

NAAC A GRADE • AFFILIATED TO BANGALORE UNIVERSITY • AICTE APPROVED • 2(F) & 12 (B) RECOGNITION OF UGC • ISO 9001:2015 CERTIFIED

Electronics City P.O. Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – DECEMBER 2024

## KANNADA – I SEMESTER BBA

## 24BBA11KA – ವ್ಯವಹಾರ ನಿರ್ವಹಣಾ ಕನ್ನಡ 1

**Time: 3 Hours** **Max. Marks: 80**

**I. ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (200 ಪದಗಳಿಗೆ ಮೀರದಂತೆ)** 3x10=30

1. ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಕವಿತೆಯ ಮಹತ್ವವೇನು? ವಿವರಿಸಿ.
2. ಪಂಪ, ರನ್ನ, ಹರಿಹರ ಇವರಲ್ಲಿ ಇಬ್ಬರು ಕವಿಗಳನ್ನು ಕುರಿತು ಟಿಪ್ಪಣಿ ಬರೆಯಿರಿ
3. ಗಂಡ–ಹೆಂಡಿರ ಜಗಳದ ಸ್ವಾರಸ್ಯವೇನು? ವಿವರಿಸಿ.
4. "ವಾರೆನ್ ಬಫೆಟ್ ವಿಶ್ವದಾದ್ಯಂತ ಹೂಡಿಕೆದಾರರೆಲ್ಲರ ಆರಾಧ್ಯದೈವ" ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.

**II. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (100 ಪದಗಳಿಗೆ ಮೀರದಂತೆ)** 5x5=25

1. ಉದ್ಯೋಗ ಮತ್ತು ಕನ್ನಡದ ನಡುವೆ ಇರಬೇಕಾದ ಸಂಬಂಧ ಕುರಿತು ಬರೆಯಿರಿ.
2. ನಗರದ ವ್ಯಕ್ತಿಗಳ ವರ್ತನೆ ಹೇಗಿದೆ?
3. ಸಂಸ್ಕೃತ ಪದಗಳು ತತ್ಸಮ ತದ್ಭವಗಳಾಗುವ ಬಗೆಯನ್ನು ಕುರಿತು ಬರೆಯಿರಿ
4. ಲಲಿತಾ–ವೆಂಕಟೇಶಮೂರ್ತಿ ಅವರ ಸಂಭಾಷಣೆಯನ್ನು ನಿರೂಪಿಸಿ.
5. ಗಂಡನ ಅನಾರೋಗ್ಯದ ಸಂದರ್ಭದಲ್ಲಿ ಹೆಂಡತಿಯ ಸಂಕಟವನ್ನು ಕುರಿತು ಬರೆಯಿರಿ.
6. ಹೊಸ ಬ್ಯಾಂಕುಗಳ ಉದಯಕ್ಕೆ ಪ್ರಮುಖ ಕಾರಣಗಳಾವುವು?

**III. ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿ.** 1x5=5

ಒಂದು ಕಾಡಿನ ನಿವಾಸಿಗಳಾಗಿದ್ದ ಕಪ್ಪೆಗಳಲ್ಲಿ ಕೆಲವು ಒಂದು ದಿನ ಆಹಾರ ಹುಡುಕಿಕೊಂಡು ಕುಪ್ಪಳಿಸುತ್ತ ಗುಂಪಾಗಿ ಹೋಗುತ್ತಿದ್ದವು. ಅವುಗಳಲ್ಲಿ ಎರಡು ಆಯತಪ್ಪಿ ದಾರಿಯಲ್ಲಿದ್ದ ಹಳ್ಳವೊಂದಕ್ಕೆ ಬಿದ್ದು ಬಿಟ್ಟವು. ಮಿಕ್ಕ ಕಪ್ಪೆಗಳು ಹಳ್ಳದ ಸುತ್ತ ಗುಂಪು ಕೂಡಿದವು. ಇಣುಕಿ ನೋಡಿದವು. ಹಳ್ಳವು ಆಳವಾಗಿತ್ತು. ಒಳಗೆ ಬಿದ್ದ ನತದೃಷ್ಟ ಕಪ್ಪೆಗಳನ್ನು ಕುರಿತು, "ಇಷ್ಟು ಆಳದ ಹಳ್ಳದಿಂದ ಹೇಗೆ ಮೇಲಕ್ಕೆ ಬರುತ್ತೀರಿ? ನಿಮ್ಮ ಕತೆ ಮುಗೀತು" ಎಂದು ಒಕ್ಕೊರಲಿನಿಂದ ವಟಗುಟ್ಟಿದವು. ಒಳಗೆ ಬಿದ್ದ ಕಪ್ಪೆಗಳು ಪ್ರಾಣ ಉಳಿಸಿಕೊಳ್ಳಲು ಜಿಗಿದಾಡಿದಂತೆಲ್ಲ ಹಳ್ಳದ ಮೇಲೆ ಸುತ್ತುವರೆದು ಕುಳಿತಿದ್ದ ಕಪ್ಪೆಗಳು, "ನೀವು ಮೇಲೆ ಬರುವುದು ಸಾಧ್ಯವೇ ಇಲ್ಲ. ಸುಮ್ಮನೇ ಯಾಕೆ ಎಗರಾಡಿ ಮೈ ನೋಯಿಸಿಕೊಳ್ಳುತ್ತೀರಿ. ನೀವು ಸತ್ತಂತೆಯೇ ಸರಿ. ವ್ಯರ್ಥ ಪ್ರಯತ್ನ" ಎಂದು ಮತ್ತೆ ಮತ್ತೆ ವಟಗುಟ್ಟುತ್ತಲೇ ಇದ್ದವು.

ಹಳ್ಳದ ಮೇಲಿನಿಂದ ಕಪ್ಪೆಗಳು ಸಾಮೂಹಿಕವಾಗಿ ಪದೇ ಪದೇ ವಟಗುಟ್ಟುತ್ತ ಹಳ್ಳದೊಳಗಿನ ಕಪ್ಪೆಗಳ ಪ್ರಯತ್ನವನ್ನು ನಿರುತ್ಸಾಹಗೊಳಿಸುತ್ತಿದ್ದವು. ತಳದಲ್ಲಿ ಜಿಗಿದಾಡುತ್ತಿದ್ದ ಒಂದು ಕಪ್ಪೆಯು ತಾನು ಹೋರಾಡಿ ಪಾರಾಗಬಲ್ಲೆ ಎನ್ನುವ

ST. FRANCIS DE SALES COLLEGE EXCELLENCE • EFFICIENCY • TRANSFORMATION ELECTRONICS CITY, BENGALURU

ಅಂತಃಸ್ಥೈರ್ಯವನ್ನೇ ಕಳೆದುಕೊಂಡಿತು. ಮೃತ್ಯುಕೂಪದಿಂದ ಹೊರ ಬರಲಾರೆಯೆನಿಸಿ ಎದೆ ಹಾರಿ ಅಸುನೀಗಿತು. ಇನ್ನೂ ಜೀವಂತವಾಗಿದ್ದ ಕಪ್ಪೆಯು ತನ್ನ ಪ್ರಯತ್ನವನ್ನು ಬಿಡದೆ ಮುಂದುವರಿಸುತ್ತಿತ್ತು. ಕಪ್ಪೆಗಳು ಮೇಲಿನಿಂದ "ನಿನ್ನ ಕತೆಯೂ ಅಷ್ಟೇ" ಎಂದು ನಿರಾಶಾವಾದದ ಬಲೆಯನ್ನು ನೇಯುತ್ತಿದ್ದವು. "ಜಿಗಿದಷ್ಟೂ ಮೈ ನೋಯಿಸಿಕೊಳ್ಳುತ್ತಿ ಅಷ್ಟೇ. ನೋವುಂಡು ಸಾಯುವ ಬದಲು ನಿನ್ನ ಸ್ನೇಹಿತನಂತೆ ನೋವಿಲ್ಲದ ಸಾವನ್ನು ಒಪ್ಪಿಕೊಳ್ಳುವುದೇ ಮೇಲು" ಎಂದು ಅದೆಷ್ಟು ಸಲ ಹೇಳಿದವೋ! ಆದರೆ ಆ ಕಪ್ಪೆಯು ಮತ್ತಷ್ಟು ಶಕ್ತಿ ಕೂಡಿಸಿಕೊಂಡು ಪ್ರಯತ್ನವನ್ನು ಮುಂದುವರೆಸಿ ಹಳ್ಳದ ದಡ ಸೇರಿ ಬಚಾವಾಯಿತು.

ಮೇಲಕ್ಕೆ ಬಂದ ಕಪ್ಪೆಯನ್ನು ಮಿಕ್ಕ ಕಪ್ಪೆಗಳು ಸುತ್ತುವರೆದವು. ತಮ್ಮ ಮಾತುಗಳಿಗೆ ಲಕ್ಷ್ಯ ಕೊಡದೆ ಕೊನೆಗೂ ಸಾವಿನ ದವಡೆಯಿಂದ ಪಾರಾಗಿ ಬಂದ ಆ ಕಪ್ಪೆಯನ್ನು ಕುರಿತು, "ಎಷ್ಟು ಪ್ರಯತ್ನಿಸಿದರೂ ನೀನು ಬದುಕಲಾರೆ ಎಂದು ನಾವು ಹೇಳುತ್ತಿದ್ದೆವು. ನಿನಗೆ ಕೇಳಿಸುತ್ತಿರಲಿಲ್ಲವೇ?" ಎಂದು ಕೇಳಿದವು. ಆ ಕಪ್ಪೆಯು ನಿಟ್ಟುಸಿರು ಬಿಡುತ್ತಾ "ಎಲ್ಲರೂ ಸೇರಿ ಏನೋ ವಟಗುಟ್ಟುತ್ತಿದ್ದೀರಿ ಅನ್ನಿಸುತ್ತಿತ್ತು. ನನಗೆ ಕಿವಿ ಕೇಳಿಸುವುದಿಲ್ಲ. ಬಹುಶಃ ಪ್ರಯತ್ನವನ್ನು ಬಿಡದೆ ಮುಂದುವರಿಸುವಂತೆ ನನ್ನಲ್ಲಿ ಉತ್ಸಾಹ ತುಂಬುತ್ತಿದ್ದೀರಿ ಎಂದುಕೊಂಡು ಪ್ರಯತ್ನವನ್ನು ಮುಂದುವರಿಸಿದೆ. ಧನ್ಯವಾದಗಳು" ಎಂದು ಹೇಳಿ ಮುಂದಕ್ಕೆ ಕುಪ್ಪಳಿಸಿತು. ಅವಾಕ್ಕಾದ ಮಿಕ್ಕ ಕಪ್ಪೆಗಳು ಅದನ್ನು ಹಿಂಬಾಲಿಸಿದವು.

**IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ.** 2x1=2

**V. ಇವುಗಳಲ್ಲಿ ಎರಡು ಪದಗಳಿಗೆ ಸ್ವಂತ ವಾಕ್ಯ ರಚಿಸಿ.** 2x2=4

1. ಗ್ರಾಮೀಣ 2. ಕರುನಾಡು 3. ಕಂಪ್ಯೂಟರ್ 4. ಉಳಿತಾಯ

**VI. ನಿಮ್ಮ ಊರಿನ ಕುಡಿಯುವ ನೀರಿನ ಸಮಸ್ಯೆ ಕುರಿತು ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ.** 1x5=5

**VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ.** 4x1=4

1. ನಿಧಿ 2. ನಮೂನೆ 3. ಶಹರು
4. ಇಸಾ 5. ಲೇವಾದೇವಿ 6. ದುಬಾರಿ

**VIII. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** 5x1=5

1. ಜಲನಿಧಿಯನ್ನು ಜಿಗಿದವರು ಯಾರು?
   ಅ) ಸುಗ್ರೀವ ಆ) ಹನುಮಂತ ಇ) ರಾಮ ಈ) ಜಾಂಬವಂತ
2. ನಾಗಮ್ಮಳ ಮಗನ ಹೆಸರೇನು?
   ಅ) ರಮಾನಂದ ಆ) ರಾಘಣ್ಣ ಇ) ಚಿರಂತ ಈ) ಪ್ರೇಮಾನಂದ
3. ನಮ್ಮ ನಗರದ ಬದುಕು ಕವಿತೆಯನ್ನು ರಚಿಸಿದವರು ಯಾರು?
   ಅ) ಕುವೆಂಪು ಆ) ಕೆ.ಎಸ್. ನಿಸಾರ್ ಅಹಮದ್ ಇ) ಪ್ರಸನ್ನ ಈ) ಟಿ.ಜಿ. ಶ್ರೀನಿಧಿ
4. ಹೃದಯದ ಶಸ್ತ್ರಚಿಕಿತ್ಸೆಗೆ ಬೇಕಾಗುವ ಹಣ ಎಷ್ಟು?
   ಅ) 5000 ಆ) 50000 ಇ) 90000 ಈ) 6000
5. ಮಂಗಳೂರಿನ ಸ್ಥಳೀಯ ಕನ್ನಡ ಪತ್ರಿಕೆ ಹೆಸರೇನು?
   ಅ) ಸ್ವದೇಶಾಭಿಮಾನಿ ಆ) ಸುಧಾ ಇ) ಪ್ರಜಾವಾಣಿ ಈ) ಮಯೂರ

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY, BENGALURU